ವಿಷಯ: ಮಲೆಬೆನ್ನೂರಿನ ಸಾರ್ವಜನಿಕ ವಿದ್ಯಾರ್ಥಿನಿಲಯದ ಕಟ್ಟಡ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1362 (2032)

ಶ್ರೀ ಪ್ಯೆ. ನಾಗಪ್ಪ (ಹರಿಹರ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹರಿಹರ ತಾಲ್ಲೂಕಿನ ಮಲೆಬೆನ್ನೂರು ಗ್ರಾಮದಲ್ಲಿ ಸಾರ್ವಜನಿಕ ವಿದ್ಯಾರ್ಥಿನಿಲಯ ಯಾವ ವರ್ಷ ಪ್ರಾರಂಭಿಸಲ್ಪಟ್ಟಿದೆ ?

ಆ) ಸದರಿ ನಿಲಯದ ಈ ಕಟ್ಟಡ ಕಾರ್ಯ ಯಾವ ಹಂತದಲ್ಲಿದೆ. ವಿಳಂಬಕ್ಕೆ ಕಾರಣಗಳೇನು ?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು)

ಅ) ಮಲೆಬೆನ್ನೂರು ಗ್ರಾಮ, ಹರಿಹರ ತಾಲ್ಲೂಕು ಇಲ್ಲಿ ಸಾರ್ವಜನಿಕ ವಿದ್ಯಾರ್ಥಿನಿಲಯವನ್ನು 1983-84ನೇ ಸಾಲಿನಿಂದ ಪ್ರಾರಂಭಿಸಲಾಗಿದೆ.

ಆ) ನಿರ್ಮಾಣ ಹಂತವು ತಾರ್ಸಿ ಮಟ್ಟದಲ್ಲಿದ್ದಾಗ, ನಿವೇಶನದ ಬಗ್ಗೆ ತಕರಾರು ಉದ್ಭವಿಸಿ ಉಚ್ಚ ನ್ಯಾಯಾಲಯದಲ್ಲಿ ಕಟ್ಟಳೆ ಪ್ರಾರಂಭವಾಗಿ ತಡೆಯಾಜ್ಞೆ ನೀಡಲಾಗಿತ್ತು. ದಿನಾಂಕ 28-2-92 ರಂದು ತಡೆಯಾಜ್ಞೆಯನ್ನು ತೆರವು ಗೊಳಿಸಿರುವುದರಿಂದ ನಿರ್ಮಾಣ ಕಾರ್ಯವನ್ನು ಪುನರಾರಂಭಿಸಲು ಕರ್ನಾಟಕ ಭೂಸೇನಾ ನಿಗಮಕ್ಕೆ ದಿನಾಂಕ 29-2-92ರಂದು ಸೂಚನೆ ನೀಡಲಾಗಿದೆ.

ವಿಷಯ: ಹರಿಹರ ಸಾರ್ವಜನಿಕ ಆಸ್ಪತ್ರೆ ಸಿಬ್ಬಂದಿ ವಸತಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1363 (2033)

ಶ್ರೀ ಪ್ಯೆ. ನಾಗಪ್ಪ (ಹರಿಹರ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹರಿಹರ ಪಟ್ಟಣದ ಸಾರ್ವಜನಿಕ ಆಸ್ಪತ್ರೆಯ ಕಟ್ಟಡ ಒರ್ವ ದಾನಿಯಿಂದ ಕಟ್ಟಿಸಲ್ಪಟ್ಟಿದೆಯಲ್ಲವೆ; ವೈದ್ಯಾಧಿಕಾರಿಗಳ ಮತ್ತು ಇತರ ಸಿಬ್ಬಂದಿ ವಾಸದ ಮನೆಗಳ ಕಟ್ಟಡಗಳನ್ನು ಈ ಆಸ್ಪತ್ರೆ ಹೊಂದಿದೆಯೇ; ಹಾಗಿಲ್ಲದಿದ್ದಲ್ಲಿ ವಿಳಂಬಕ್ಕೆ ಕಾರಣಗಳೇನು ?

ಆ) ಒರ್ವ ದಾನಿ ಕ್ಷ-ಕಿರಣ ಕೊಠಡಿ ಕಟ್ಟಡದ ನಿರ್ಮಾಣಕ್ಕೆ 25 ಸಾವಿರ ರೂಪಾಯಿಗಳನ್ನು ನೀಡಿದ್ದಾಗ್ಯೂ ಇಂದಿಗೂ ಕಟ್ಟಡದ ಕಾರ್ಯ ಪ್ರಾರಂಭಿಸಲಾಗಿಲ್ಲದಿರುವುದಕ್ಕೆ ಕಾರಣಗಳೇನು ?

ಇ) ದಾನಿಗಳಿಂದ ಆಸ್ಪತ್ರೆಯ ಕಟ್ಟಡ ಇತರ ಕಟ್ಟಡಕ್ಕೆ ಹಣ ಸಂಗ್ರಹಿಸಿ ಪಾವತಿ ಮಾಡಿದ್ದಾಗ್ಯೂ, ಉಳಿದ ಸೌಲಭ್ಯಗಳ ನೀಡಿಕೆಯಲ್ಲಿ ಸರ್ಕಾರ ತಾತ್ಸಾರ ಮಾಡಿರುವುದು ಸರಿಯೆ ; ಹಾಗಿದ್ದಲ್ಲಿ ಈ ವರ್ಷವೇ ಈ ಸೌಲಭ್ಯಗಳನ್ನು ಒದಗಿಸುವಲ್ಲಿ ಆದ್ಯತೆ ನೀಡಲಾಗುವುದೇ ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಹೌದು.

ಆ) ಹಳೆಯ ಆಸ್ಪತ್ರೆಯ ಆವರಣದಲ್ಲಿ 9 ವಸತಿ ಗೃಹಗಳು ಇವೆ.

ಇ) ದಾನಿಗಳು 20,000ರೂ ವಂತಿಕೆಯನ್ನು ಮಾತ್ರ ನೀಡಿರುತ್ತಾರೆ. ಈ ಮೊತ್ತವು ಸಾಕಾಗದಿರುವುದರಿಂದ ಕ್ಷ-ಕಿರಣ ಕಟ್ಟಡದ ಕಾರ್ಯ ಪ್ರಾರಂಭವಾಗಿಲ್ಲ.

ಈ) ಹಣದ ಲಭ್ಯತೆಯಿಂದ ಈ ವರ್ಷ ಈ ಸೌಲಭ್ಯವನ್ನು ಒದಗಿಸುವುದು ಸಾಧ್ಯವಿಲ್ಲ.